# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಆಡಳಿತ ಕಛೇರಿ: ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103.

ಸಂಖ್ಯೆ: ಬಿ.ಎನ್.ಯು. /ಶೈಕ್ಷಣಿಕ/ ಸ್ನಾತಕೋತ್ತರ ಪ್ರವೇಶಾತಿ/ 3180 / 21–22 ದಿನಾಂಕ:03.12.2021

## ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ 2021–22

2021–22ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ; ಸ್ನಾತಕೋತ್ತರಕೇಂದ್ರ, ಮಂಗಸಂದ್ರ, ಕೋಲಾರ; ಸ್ನಾತಕೋತ್ತರ ಕೇಂದ್ರ, ಹೊಸಕೋಟೆ ಮತ್ತು ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

**ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ಕೋಲಾರ ಮತ್ತು ಹೊಸಕೋಟೆ ಇಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರ**

ಅ. **ಕಲಾ ನಿಕಾಯ**: ಎಂ.ಎ. ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ).

ಆ. **ವಿಜ್ಞಾನ ನಿಕಾಯ:** ಎಂ.ಎಸ್ಸಿ. ಗಣಿತಶಾಸ್ತ್ರ, ಗಣಕವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ (ಎಂ.ಎಲ್.ಐ.ಎಸ್ಸಿ.), ಸಸ್ಯಶಾಸ್ತ್ರ ಮತ್ತು ಭೌತಶಾಸ್ತ್ರ.
ರಸಾಯನಶಾಸ್ತ್ರ–ಹೊಸಕೋಟೆ ಸ್ನಾತಕೋತ್ತರ ಕೇಂದ್ರ.

ಇ. **ವಾಣಿಜ್ಯ ನಿಕಾಯ:** ಎಂ.ಕಾಂ.

**ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ವಿವರ:**

ಅ. **ಕಲಾ ನಿಕಾಯ:** ಎಂ.ಎ. ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಂವಹನ ಹಾಗೂ ಸಮಾಜ ಕಾರ್ಯ(ಎಂ.ಎಸ್.ಡಬ್ಲ್ಯೂ).

ಆ. **ವಿಜ್ಞಾನ ನಿಕಾಯ:** ಎಂ.ಎಸ್ಸಿ. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಗಣಕ ವಿಜ್ಞಾನ, ಜೀವ ರಸಾಯನಶಾಸ್ತ್ರ, ಜೀವತಂತ್ರಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಆಡಿಯೋಲಜಿ, ಸ್ಪೀಚ್ ಲಾಂಗ್ವೇಜ್ ಪೆಥಾಲಜಿ, ಮನಃಶಾಸ್ತ್ರ ಮತ್ತು ಕೌನ್ಸೆಲಿಂಗ್ ಸೈಕಾಲಜಿ.

ಇ. **ವಾಣಿಜ್ಯ ಮತ್ತು ನಿರ್ವಹಣಾ ನಿಕಾಯ:** ಎಂ.ಕಾಂ.

ಈ. ಎಂ.ಕಾಂ. (ಫೈನಾನ್ಷಿಯಲ್ ಅನಾಲಿಸಿಸ್), ಮತ್ತು ಎಂ.ಟಿ.ಟಿ.ಎಂ. (ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್ಮೆಂಟ್).

**ಸೂಚನೆ:** 1. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿವಿಧ ಕಾಲೇಜುಗಳು ಮತ್ತು ಈ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರಗಳನ್ನು ಈ ವೆಬ್‌ಸೈಟ್ http://bnu.ac.in ನಲ್ಲಿ ಪ್ರಕಟಿಸಿದೆ.

2. ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಪಿಜಿಸಿಇಟಿ ಮುಖಾಂತರ ಪ್ರವೇಶಾತಿಯನ್ನು ಕಲ್ಪಿಸಿಕೊಡಲಾಗುವುದು.

ಕುಲಸಚಿವರು
3/12
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ–ಕರ್ನಾಟಕ–563 103



Scanned with Oken Scanner

ಈ. ಶಿಕ್ಷಣ ನಿಕಾಯ: ಎಂ.ಇಡಿ. (ಶಿಕ್ಷಣ)

ಇ. ಅರ್ಜಿಯನ್ನು ಸಲ್ಲಿಸಲು ಮಾರ್ಗಸೂಚಿಗಳು:

1. ಪ್ರವೇಶಾತಿಗೆ ಸಂಬಂಧಿಸಿದ ಅರ್ಹತಾ ಮಾನದಂಡಗಳು, ನಿಯಮಗಳು, ಸೀಟ್ ಮ್ಯಾಟ್ರಿಕ್ಸ್, ಶುಲ್ಕದ ಮಾಹಿತಿ ಹಾಗೂ ಇತರೆ ಮಾಹಿತಿಗಳನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವೆಬ್‌ಸೈಟ್ **http://bnu.ac.in** ನಲ್ಲಿ ನೋಡಬಹುದು.
2. **ಅರ್ಜಿಗಳನ್ನು ಆನ್-ಲೈನ್ ಮುಖಾಂತರವೇ ಭರ್ತಿಮಾಡಬೇಕು.**
3. ಅಭ್ಯರ್ಥಿಗಳು ಅರ್ಜಿಯನ್ನು ತುಂಬಲು ಮೊಬೈಲ್ ಸಂಖ್ಯೆ,ಹಾಗೂ ಇ-ಮೇಲ್ ವಿಳಾಸದ ಮೂಲಕವೇ ನೋಂದಣಿ ಮಾಡಬೇಕಾಗಿರುವುದರಿಂದ ಮೊಬೈಲ್ ಸಂಖ್ಯೆ, ಹಾಗೂ ಇ-ಮೇಲ್ ವಿಳಾಸ ಕಡ್ಡಾಯವಾಗಿಬೇಕಾಗಿರುತ್ತದೆ.
4. ಪ್ರತಿಯೊಂದು ಸ್ನಾತಕೋತ್ತರ ಕೋರ್ಸಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಬಯಸಿದ್ದಲ್ಲಿ, ಅಭ್ಯರ್ಥಿಗಳು ಆಯಾ ಕೋರ್ಸಿನ ಅರ್ಜಿಗಳ ಜೊತೆ ಹೆಚ್ಚುವರಿ ಅರ್ಜಿ ಶುಲ್ಕ ರೂ. ರೂ. 220/-(ಪರಿಶಿಷ್ಟ ಜಾತಿ / ಪಂಗಡ ಹಾಗೂ ಪ್ರವರ್ಗ-1, ವಿಶೇಷ ಚೇತನರ (P.W.D) ಅಭ್ಯರ್ಥಿಗಳು ರೂ. 110/-) ಪಾವತಿಸಿ ಸಲ್ಲಿಸತಕ್ಕದ್ದು. ಅರ್ಜಿದಾರರು ಅರ್ಜಿಯ ಶುಲ್ಕವನ್ನು ಅರ್ಜಿಯನ್ನು ತುಂಬುವ ವೇಳೆಯಲ್ಲಿ ಪೇಮೆಂಟ್ ಗೇಟ್‌ವೇ(Payment Gateway) ಮುಖಾಂತರವೇ ಸಂದಾಯ ಮಾಡಲು ತಿಳಿಸಿದೆ.
5. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕೋರ್ಸುಗಳಿಗೆ ಅರ್ಜಿಸಲ್ಲಿಸಲು ಬಯಸಿದ್ದಲ್ಲಿ ಒಂದೇ ಲಾಗಿನ್ ರುಜುವಾತು (Login Credential)ನ್ನು ಬಳಸಿ ವಿವಿಧ ಕೋರ್ಸುಗಳನ್ನು ಆಯ್ಕೆಮಾಡಿ ಅರ್ಜಿ ಸಲ್ಲಿಸಬಹುದು. ಪ್ರತಿಯೊಂದು ಕೋರ್ಸಿಗೂ ಪ್ರತ್ಯೇಕ ಅರ್ಜಿ ಒಂದು ವಿಶಿಷ್ಟ ಸಂಖ್ಯೆಯೊಂದಿಗೆ ರಚಿಸಲ್ಪಡುತ್ತದೆ.
6. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳ ಜೊತೆ ಅರ್ಜಿ ಶುಲ್ಕ ಪಾವತಿಸಿದ ರಸೀದಿ ಮತ್ತು ಸೀಟುಗಳ ಕೋರಿಕೆಗೆ ಬೇಕಾಗುವ ಪೂರಕ ದಾಖಲೆಗಳನ್ನು ಲಗತ್ತಿಸಿ, **ನೊಂದಾಯಿತ ಅಂಚೆಯ ಮುಖಾಂತರ** ಅಥವಾ **ಖುದ್ದಾಗಿ** ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ **ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಆಡಳಿತ ಕಛೇರಿ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103** ಇಲ್ಲಿಗೆ ತಲುಪಿಸುವುದು.
7. **ಭರ್ತಿ ಮಾಡಿದ ಅರ್ಜಿಗಳನ್ನು** ನಿಗಧಿ ಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸುವ ಅಥವಾ ತಲುಪುವ **ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ** ತಿರಸ್ಕರಿಸಲಾಗುವುದು.
8. ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ : 9742143018; 9972764051; 7760695551. Email: registrar@bnu.ac.in and bangalorenorthuniversity2017@gmail.com.

| | ಅರ್ಜಿಗಳನ್ನು ವಿತರಿಸುವ, ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು: | |
|---|---|---|
| 1. | ಅಂತರ್ಜಾಲ ಮೂಲಕ ಅರ್ಜಿಯನ್ನು ಪಡೆಯುವ ಪ್ರಾರಂಭದ ದಿನಾಂಕ | 04.12.2021 |
| 2. | ದಂಡ ಶುಲ್ಕವಿಲ್ಲದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 13.12.2021 |
| 3. | ಮುದ್ರಿತ ಅರ್ಜಿಯನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಅಂತಿಮ ದಿನಾಂಕ:** | 18.12.2021 |
| 4. | ತಾತ್ಕಾಲಿಕ ಅರ್ಹತಾ ಪಟ್ಟಿ ಪ್ರಕಟಿಸುವ ದಿನಾಂಕ: | 24.12.2021 |
| 5. | ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 28.12.2021 |

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ–ಕರ್ನಾಟಕ–563 103.



Scanned with Oken Scanner

| | | |
|---|---|---|
| 6. | ಅಂತಿಮ ಅರ್ಹತಾ ಪಟ್ಟಿ ಪ್ರಕಟಿಸುವ ದಿನಾಂಕ | ವೆಬ್ ಸೈಟ್ ನಲ್ಲಿ |
| 7. | ಭೌತಿಕವಾಗಿ ವಿವಿಧ ವಿಭಾಗಗಳ ಪ್ರವೇಶ ಪ್ರಕ್ರಿಯೆ ದಿನಾಂಕ: | ಪ್ರಕಟಿಸಲಾಗುವುದು http://bnu.ac.in ನಲ್ಲಿ ಪ್ರಕಟಿಸಲಾಗುವುದು. |

ಸೂಚನೆ: ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ / ಪಂಗಡ ಹಾಗೂ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಆದ್ಯತೆಯ ಮೇರೆಗೆ ಹಾಸ್ಟೇಲ್ ಸೌಲಭ್ಯವನ್ನು ಕರ್ನಾಟಕ ಸರ್ಕಾರದ ನಿಯಮಾನುಸಾರ ಕಲ್ಪಿಸಿಕೊಡಲಾಗುವುದು.

ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ನೀತಿ–2020ರ ಮಾರ್ಗಸೂಚಿಗಳನ್ವಯ ಆಡಳಿತಾತ್ಮಕ ಹಾಗೂ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲಾಗುವುದು.

3/12

ಕುಲಸಚಿವರು

ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ – ಕರ್ನಾಟಕ – 563 103.

ಪ್ರತಿಗಳು,

1. ಆಪ್ತ ಶಾಖೆ, ಕುಲಪತಿಗಳ ಕಾರ್ಯಾಲಯ/ ಕುಲಸಚಿವರು (ಮೌ)/ ಹಣಕಾಸು ಅಧಿಕಾರಿಗಳು/ನಿರ್ದೇಶಕರು, ,ಸ್ನಾತಕೋತ್ತರ ಕೇಂದ್ರ/ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
2. ಡೀನರು, ಕಲಾ, ವಿಜ್ಞಾನ, ವಾಣಿಜ್ಯ & ನಿರ್ವಹಣೆ ಮತ್ತು ಶಿಕ್ಷಣ ನಿಖಾಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ.
3. ಪ್ರಾಂಶುಪಾಲರು, ಸಂಯೋಜಿತ ಕಾಲೇಜುಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
4. ಕಛೇರಿ ಪ್ರತಿ.

Scanned with Oken Scanner